**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

**ಸಿಸಿ ನಂಃ 2058/2023**

ಫಿರ್ಯಾದಿಃ- ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿ - ಶಿವನಗೌಡ ದ್ಯಾಮನಗೌಡ ಪಾಟೀಲ
ವಯಾಃ 28 ವರ್ಷ, ಉಃ ಕೂಲಿಕೆಲಸ,
ಸಾಃ ಲಿಂಗನಕೊಪ್ಪ ತಾಃ ಕಲಘಟಗಿ, ಧಾರವಾಡ.

**ದೋಷಾರೋಪಣೆ**

ಶ್ರೀ ಅಲ್ಲಪ್ಪ ಮಹಾದೇವಪ್ಪ ಬಡಿಗೇರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ ಆದ ನಾನು ಈ ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳೆಂದರೆಃ-

ಮೊದಲನೇಯದಾಗಿ, ದಿನಾಂಕ 20-03-2023 ರಂದು ಮಧ್ಯಾಹ್ನ 01.30 ಗಂಟೆ ಸುವಾರಿಗೆ ಧಾರವಾಡ ವಿದ್ಯಾಗಿರಿ ಪೊಲೀಸ್ ಠಾಣಾ ಹದ್ದಿಯಲ್ಲಿ ಬರುವ ರೇಲ್ವೆ ಸ್ಟೇಷನ ರೋಡ ವನವಾಸಿ ರಾಮಮಂದಿರ ಹತ್ತಿರ ಆರೋಪಿತನಾದ ನೀನು ಪರೀಕ್ಷೆ ಬರೆದು ಹೋಗುತ್ತಿರುವ ಪಿರ್ಯಾದಿಗೆ ಕರೆದು ಊರಿನಲ್ಲಿ ನನಗೆ ಎದುರಿಗೆ ಮಾತನಾಡುತ್ತಿ ಇವತ್ತಿನಿಂದ ನನ್ನ ಸಂಗಡ ಇರಬೇಕು ಇಲ್ಲವಾದಲ್ಲಿ ನಿನ್ನನ್ನು ಬಿಡುವುದಿಲ್ಲ ಅಂತಾ ಹೇಳಿದಾಗ ಇದಕ್ಕೆ ನಿರಾಕರಿಸಿದ ಪಿರ್ಯಾದಿಗೆ ಆರೋಪಿತನಾದ ನೀನು ಪಿರ್ಯಾದಿ ಮೈಕೈಗೆ ಮುಖಕ್ಕೆ ತೊಡಗೆ ನಿನ್ನ ಕೈಗಳಿಗೆಂದ ಹೊಡೆದು ದುಃಖಾಪತ ಪಡಿಸಿ ಆ ಮೂಲಕ ಭಾ ದಂ ಸಂ ಕಲಂ **323** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಎರಡನೆಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತನಾದ ನೀನು ಕಬ್ಬಿಣದ ರಾಡಿನಿಂದ ಪಿರ್ಯಾದಿಯ ತಲೆಗೆ ಹೊಡೆದು ದುಃಖಾಪತ ಪಡಿಸಿ ಆ ಮೂಲಕ ಭಾ ದಂ ಸಂ ಕಲಂ **324** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತಿರಿ?

ಮೂರನೆಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿತನಾದ ನೀನು ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಸ್ಥಳದಲ್ಲಿ ಅವಮಾನ ಮಾಡಿ ಆ ಮೂಲಕ ಭಾ ದಂ ಸಂ ಕಲಂ **504** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಕೊನೆಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತನಾದ ನೀನು ಫಿರ್ಯಾದಿಗೆ ಜೀವ ಬೆದರಿಕೆ ಹಾಕಿ ಆ ಮೂಲಕ ನೀವು ಭಾ ದಂ ಸಂ ಕಲಂ **506** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಏಸಗಿರುತ್ತೀರಿ ?

ಆದ್ದರಿಂದ ಈ ಮೇಲೆ ಹೇಳಿದ ದೋಷಾರೋಪಣೆಯ ಬಗ್ಗೆ ಆರೋಪಿಯಾದ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕಾಗಿ ನಿರ್ದೇಶಿಸುತ್ತೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಾದ ಕನ್ನಡದಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನೀಡಿರುವ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು.)

ಧಾರವಾಡ
ದಿನಾಂಕಃ

(ಅಲ್ಲಪ್ಪ ಎಂ.ಬಡಿಗೇರ)
3 ನೇ ಹೆ ಹಿ ದಿ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಧಾರವಾಡ.

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾ.ಯಾಲಯ, ಧಾರವಾಡ.**

**ಸಿಸಿ ನಂಃ 2058/2023**

ಫಿರ್ಯಾದಿಃ- ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿ - ಶಿವನಗೌಡ ದ್ಯಾಮನಗೌಡ ಪಾಟೀಲ
ವಯಾಃ 28 ವರ್ಷ, ಉಃ ಕೂಲಿಕೆಲಸ,
ಸಾಃ ಲಿಂಗನಕೊಪ್ಪ ತಾಃ ಕಲಘಟಗಿ, ಧಾರವಾಡ.

ಃಆಪಾದನೆಃ

ಪ್ರಶ್ನೆಃ ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುತ್ತೀರಾ?

ಉತ್ತರಃ

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾ.ಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ 3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ ಸಿಜೆಎಂ., ಧಾರವಾಡ.

ಆರೋಪಿತರ ಸಹಿ